**ಈ ಶಾಲೆಗೆ ಗುಮಾಸ್ತರಿಲ್ಲ!**
ವಿಶೇಷವೆಂದರೆ ಇಷ್ಟು ದೊಡ್ಡ ಪ್ರೌಢಶಾಲೆ ನಿರ್ವಹಣೆಗೆ ಗುಮಾಸ್ತ, ಜವಾನರಿಲ್ಲ. ಕಸಗುಡಿಸುವ, ಸ್ವಚ್ಛತೆಗೆ ಪ್ರತ್ಯೇಕ ಸಿಬ್ಬಂದಿಗಳಿಲ್ಲ. 1996 ರಿಂದ 2014ರ ವರೆಗೂ ಶಿಕ್ಷಕೇತರ ಸಿಬ್ಬಂದಿಯೇ ಇಲ್ಲದೆ ಈ ಶಾಲೆಯ ಪ್ರತಿಯೊಂದು ಕೆಲಸವೂ ಸುಸೂತ್ರವಾಗಿ ನಡೆದಿದೆ. ಇತ್ತೀಚೆಗಷ್ಟೇ ಅನುಕಂಪದ ಆಧಾರದಲ್ಲಿ ನೇಮಕಗೊಂಡ ಒರ್ವ ಗುಮಾಸ್ತ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಆರಂಭಕ್ಕೆ ವೇದಿಕೆ ಒದಗಿಸಿದ ಶಾಲೆಯೆಂದೂ ಖ್ಯಾತಿ ಪಡೆದಿದೆ.

ಪ್ರಾಥಮಿಕ ಹಂತದಲ್ಲಿ ಶತಮಾನದ ಇತಿಹಾಸ ಹೊಂದಿರುವ ಈ ಶಾಲೆ 1996–– 97ರ ಸಾಲಿನಲ್ಲಿ ಪ್ರೌಢಶಾಲೆಯಾಗಿ ಮೇಲ್ದರ್ಜೆಗೆ ಏರಿತು. 2001ರವರೆಗೂ ಪ್ರಾಥಮಿಕ ಶಾಲಾ ಕಟ್ಟಡದ ಭಾಗದಲ್ಲೇ ಕಾರ್ಯ ನಿರ್ವಹಿಸುತ್ತಿತ್ತು. ಶಾಲಾ ಶಿಕ್ಷಕವೃಂದ ಮತ್ತು ಶಾಲಾಭಿವೃದ್ಧಿ ಸಮಿತಿಗಳ ಶತಪ್ರಯತ್ನದಿಂದ ಸರ್ಕಾರ, ಶಿಕ್ಷಣ ಇಲಾಖೆ ಜನಪ್ರತಿನಿಧಿಗಳು, ವಿದ್ಯಾಭಿಮಾನಿಗಳ ನೆರವಿನಿಂದ 2005—06 ಸಾಲಿನಲ್ಲಿ ಪ್ರೌಢಶಾಲೆಯ ಕಟ್ಟಡ, ಸುಸಜ್ಜಿತ ಸಭಾಂಗಣ, ವಿದ್ಯಾರ್ಥಿನಿಯರಿಗಾಗಿ 16ರಷ್ಟು ಸಂಖ್ಯೆಯ ಶೌಚಾಲಯಗಳು ನಿರ್ಮಾಣ ಗೊಂಡವು.

2009ರಲ್ಲಿ ಗ್ರಂಥಾಲಯ, ಪ್ರಯೋಗಾಲಯ, ಅಕ್ಷರ ದಾಸೋಹ ಕೊಠಡಿ, ಶಾಲಾ ಸ್ವಾಗತ ದ್ವಾರ ಗೋಪುರ ನಿರ್ಮಾಣಗಳು ನಡೆದು, ಪೂರ್ಣ ಸೌಕರ್ಯಗಳಿಂದ ಶಾಲೆ ಕಾರ್ಯ ನಿರ್ವಹಿಸುತ್ತಿದೆ. ದಾನಿಗಳ ನೆರವಿನಿಂದ ತೆರೆದ ಬಾವಿ ಮತ್ತು ಶುದ್ಧೀಕೃತ ಕುಡಿವ ನೀರಿನ ಘಟಕವೂ ಒದಗಿ ಬಂದಿದೆ. 368 ವಿದ್ಯಾರ್ಥಿಗಳು, 11ಮಂದಿ ಶಿಕ್ಷಕರ ತಂಡ, ಪೂರ್ಣ ಫಲಿತಾಂಶ ಇದು ಶಾಲೆ ಸಾಧನೆ.

ಮೂರು ತರಗತಿ, ಎರಡೆರಡು ವಿಭಾಗಗಳಲ್ಲಿ 368 ವಿದ್ಯಾರ್ಥಿಗಳು ವ್ಯಾಸಂಗ ನಿರತರಾಗಿದ್ದು, ಗೌರವ ಶಿಕ್ಷಕರೂ ಸೇರಿದಂತೆ ಒಟ್ಟು ಹನ್ನೊಂದು ಮಂದಿಯ ಶಿಕ್ಷಕರ ತಂಡ ಕಾರ್ಯ ನಿರತವಾಗಿದೆ. ಸರಕಾರ ವಿಧಿಸಿದ 37:1 ವಿದ್ಯಾರ್ಥಿ – ಶಿಕ್ಷಕರ ಅನುಪಾತ ಸಮರ್ಪಕವಾಗಿ ಕಾಯ್ದುಕೊಳ್ಳಲಾಗಿದೆ. ಪೂರ್ಣ ಫಲಿತಾಂಶ ಶಿಕ್ಷಕವೃಂದದ ಅಹರ್ನಿಶಿ ದುಡಿಮೆ ಮತ್ತು ಪ್ರೇರಣೆಯಿಂದ ಸಾಧ್ಯವಾಗಿದೆ.

ಪ್ರತಿಯೊಬ್ಬ ಶಿಕ್ಷಕರೂ ಶಿಕ್ಷಣಕ್ಕೆ ಸಂಬಂಧಿಸಿದ ತರಬೇತಿಗಳಲ್ಲಿ ತಪ್ಪದೆ ಭಾಗವಹಿಸಿ ಮಕ್ಕಳ ಸರ್ವಾಂಗೀಣ ವಿಕಾಸಕ್ಕಾಗಿ ಪ್ರಯತ್ನಿಸುತ್ತಾರೆ. ಕೌನ್ಸಿಲಿಂಗ್ ಮೂಲಕ ಮಕ್ಕಳ ಮಾನಸಿಕ ಮಟ್ಟ ಮತ್ತು ಭಾವನೆ, ಆಸಕ್ತಿಗಳನ್ನು ಅಭ್ಯಸಿಸಿ ಅದಕ್ಕೆ ತಕ್ಕಂತೆ ಕಲಿಕಾ ವಿಧಾನಗಳಲ್ಲಿ ಅಗತ್ಯವೆನಿಸುವ ಸೂತ್ರ ಬಳಸಿ ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗೆ ಹೆಚ್ಚಿನ ತರಬೇತಿ ನೀಡುವ ಕಡೆ ಪೂರ್ಣ ಗಮನವಿದೆ.

ಅದಕ್ಕಾಗಿಯೇ ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗೆ ಆಗಿಂದಾಗ್ಗೆ ವಿಶೇಷ ತರಗತಿಗಳನ್ನು ನಡೆಸಿ ಇತರ ವಿದ್ಯಾರ್ಥಿಗಳ ಮಟ್ಟಕ್ಕೆ ಎತ್ತರಿಸುವ ನಿಟ್ಟಿನಲ್ಲಿ ಶಿಕ್ಷಕರ ಅಪಾರ ಶ್ರಮ ಇದೆ. ವಿದ್ಯಾರ್ಥಿಗಳ, ಪೋಷಕರ ದೂರವಾಣಿ ಮೂಲಕ ಮಕ್ಕಳ ನಿರಂತರ ಸಂಪರ್ಕವಿರಿಸಿಕೊಂಡು ಕಾಲಕಾಲಕ್ಕೆ ಅವರ ಸಮಸ್ಯೆಗಳನ್ನು ತಿಳಿದುಕೊಂಡು ಅಭ್ಯಾಸಕ್ಕೆ ಉತ್ತೇಜನ ನೀಡುವ ಪ್ರಯತ್ನಗಳೂ ನಡೆದಿವೆ.

ಪೋಷಕರ ಸಭೆ, ಚರ್ಚೆ, ವಿದ್ಯಾರ್ಥಿಗಳ ಮಧ್ಯೆ ಪರಸ್ಪರ ಪ್ರಶ್ನೋತ್ತರ, ಸಂಪನ್ಮೂಲ ವ್ಯಕ್ತಿಗಳಿಂದ ಮಾರ್ಗದರ್ಶನ, ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳ ಪರಿಚಯ, ಸಮುದಾಯದತ್ತ ಶಾಲೆ ಪರಿಕಲ್ಪನೆಯ ಅನುಷ್ಠಾನ– ಹೀಗೆ ಹಲವು ಪ್ರಯತ್ನದಲ್ಲಿ ಶಿಕ್ಷಕರು ಶ್ರಮಿಸುತ್ತಿದ್ದಾರೆ. ಸೇತುಬಂಧ, ಪೂರ್ವ ಮತ್ತು ಸಾಫಲ್ಯ ಪರೀಕ್ಷೆ, ಘಟಕ ಪರೀಕ್ಷೆ, ಕಿರುಪರೀಕ್ಷೆಗಳ ಮೂಲಕ ನಡೆಯುತ್ತಿರುತ್ತದೆ.

## ಮುಖ್ಯಸ್ಥರ ಅಹರ್ನಿಶಿ ಸೇವೆ

ಈ ಶಾಲೆಯ ಮುಖ್ಯೋಪಾಧ್ಯಾಯಿನಿ ಸರ್ವವಿಧದಲ್ಲೂ ಇತರರಿಗೆ ಮಾದರಿಯೇ ಸೈ. ಮುಖ್ಯೋಪಾಧ್ಯಾಯಿನಿಯ ಜವಾಬ್ದಾರಿ ಜೊತೆ ಇಡಿಯ ಶಾಲೆಯ ಎಲ್ಲಾ ವಿಷಯಗಳಲ್ಲೂ ಆಸಕ್ತಿ. ಪ್ರತಿಯೊಂದು ವಿಭಾಗದ ಜವಾಬ್ದಾರಿಯನ್ನು ಪ್ರತಿಯೊಬ್ಬ ಶಿಕ್ಷಕರು ವಹಿಸಿಕೊಂಡಿದ್ದರೂ ಪ್ರತಿಯೊಂದು ವಿಭಾಗದ ನಿರ್ವಹಣೆಯ ಅಚ್ಚುಕಟ್ಟಿನಲ್ಲಿ ಮುಖ್ಯೋಪಾಧ್ಯಾಯಿನಿ ಹರ್ಷಿಣಿಯವರ ದೃಷ್ಟಿ ಇದ್ದೇ ಇರುತ್ತದೆ.

ವಿಶೇಷವಾಗಿ ಶಾಲಾ ಕೈ ತೋಟ ನಿರ್ವಹಣೆಯ ಜವಾಬ್ದಾರಿ ಇವರಿಗೆ ಆಸಕ್ತಿಯ ವಿಷಯ. ವಿಜ್ಞಾನ ವಿದ್ಯಾರ್ಥಿಗಳಿಗೆ ರಸಾಯನ ಶಾಸ್ತ್ರ ಮತ್ತು ಜೀವಶಾಸ್ತ್ರ ಬೋಧಿಸುತ್ತಾರೆ. ಶಾಲೆ ಆರಂಭಕ್ಕೆ ಒಂದು ಗಂಟೆ ಮುಂಚಿತವಾಗಿ, ಶಾಲೆ ಮುಕ್ತಾಯದ ಒಂದು ಗಂಟೆ ಬಳಿಕವೂ ಅವರು ಶಾಲೆಯಲ್ಲಿ ಇರುತ್ತಾರೆ. ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ಶಾಲೆಯಲ್ಲಿ ಕೂರಿಸಿಕೊಂಡು ಓದಿಸುವುದಕ್ಕಾಗಿ ಸಾಯಂಕಾಲದ ಈ ಸಮಯ ಬಳಕೆ ಅವರ ನಿತ್ಯ ಕಾಯಕ.

ನ್ಯಾಯವಾದಿ ವಿಜಯರಾಜ ಶೆಟ್ಟಿ ಪ್ರಸಕ್ತ ಎಸ್.ಡಿ.ಎಂ.ಸಿ. ಅಧ್ಯಕ್ಷರು. ಶಾಲೆಯ



ಯೋಗ ಶಿಕ್ಷಣ



ಚೆಂಡೆ ಕಲಾತಂಡ



ಶಿಕ್ಷಕ ವೃಂದ